# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 24-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ರೈಸ್ ಬ್ರಾನ್ ಎಣ್ಣೆಗೆ ಬೇಡಿಕೆ ಹೆಚ್ಚಳ, ಅಕ್ಕಿ ತೌಡಿಗೆ ಹೆಚ್ಚಳ

ಇತ್ತೀಚಿನ ಅಂತರಾಷ್ಟ್ರೀಯ ಖಾದ್ಯ ತೈಲ ದರ ಹೆಚ್ಚಳದಿಂದ ಹಾಗೂ ಪೂರೈಕೆಯ ವ್ಯತ್ಯಯದಿಂದ ರೈಸ್ ಬ್ರಾನ್ ಎಣ್ಣೆಗೆ ಬೇಡಿಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಆರೋಗ್ಯಕರವೂ ಹಾಗೂ ಈಗಿನ ದೇಶೀ ದರ, ಸೂರ್ಯಕಾಂತಿ ಎಣ್ಣೆಕ್ಕಿಂತ ಸ್ವಲ್ಪ ಕಡಿಮೆಯೂ ಇದೆ. ಬೇಡಿಕೆ ಹೆಚ್ಚಳದಿಂದ ಕೆಲವು ರಿಫೈನರಿಗಳು ಹೆಚ್ಚಿನ ಪ್ರಮಾಣದ ರೈಸ್ ಬ್ರಾನ್ ಎಣ್ಣೆ ಉತ್ಪಾದನೆಗೆ ತಯಾರಿ ನಡೆಸುತ್ತಿವೆಯೆನ್ನಲಾಗಿದ್ದು, ಇದರಿಂದ ಅಕ್ಕಿ ತೌಡಿಗೆ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆ.

## ಈ ವರ್ಷ ಭಾರತದಿಂದ ಅಕ್ಕಿ ರಫ್ತು 1 ಮಿಲಿಯನ್ ಟನ್ ಹೆಚ್ಚಳ ಸಾಧ್ಯತೆ

ಈ ವರ್ಷ ಭಾರತದಿಂದ ಅಕ್ಕಿ ರಫ್ತು ಹಿಂದಿನ ವರ್ಷಕ್ಕಿಂತ 1 ಮಿಲಿಯನ್ ಟನ್ ಹೆಚ್ಚಳವಾಗಿ 22 ಮಿಲಿಯನ್ ಟನ್‌ಗಳಿಗೇರಬಹುದೆನ್ನಲಾದೆ. ಇದು ಒಟ್ಟು ಪ್ರಪಂಚದ ಅಕ್ಕಿ ರಫ್ತಿನ 41 ಶೇಕಡಾವೆನ್ನಲಾಗಿದ್ದು, ಇತರ 3 ಪ್ರಮುಖ ಅಕ್ಕಿ ರಫ್ತು ಮಾಡುವ ದೇಶಗಳಾದ ಥೈಲಾಂಡ್, ವಿಯೆಟ್ನಾಂ ಹಾಗೂ ಪಾಕಿಸ್ಥಾನಗಳ ಒಟ್ಟು ರಫ್ತಿಗಿಂತ ಹೆಚ್ಚಿದೆ. ಪ್ರಮುಖ ಆಹಾರ ಧ್ಯಾನಗಳ ಬಳಕೆ ಹೆಚ್ಚಳದಿಂದ ಹಾಗೂ ಜಾಗತಿಕ ಪೂರೈಕೆ ಇಳಿಕೆಯಿಂದ ಅವುಗಳ ದರ ಹೆಚ್ಚಳವಾಗಿವೆ. ಆಹಾರ ಹಣದುಬ್ಬರದಿಂದ ಒಂದೊಮ್ಮೆ ಗೋಧಿ ಮತ್ತಿತರ ಆಹಾರ ಧ್ಯಾನಗಳ ಬದಲಾಗಿ ಅಕ್ಕಿಯ ಪರ್ಯಾಯ ಬಳಕೆ ಹೆಚ್ಚಳಗೊಂಡರೆ ಅಕ್ಕಿಯ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ವಿಫುಲ ದಾಸ್ತಾನು ಹಾಗೂ ಉತ್ಪಾದನೆ ಹೆಚ್ಚಳವಿರುವುದರಿಂದ ಈವರೆಗೆ ಅಕ್ಕಿ ದರ ಹೆಚ್ಚಳವಾಗಿಲ್ಲ.